ಅ ದಾ ಸಂ **11/2019**

ಉಮೇಶ
ಪಿ.ಡಬ್ಲೂ-1

**ದಿನಾಂಕ 04.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
ಪಾಟಿ ಸವಾಲು ಪ್ರತಿವಾದಿಯರ ಪರ ಶ್ರೀ ಎಸ್ ಬಿ ಜಿ ವಕೀಲರವರಿಂದ

ನಾನು ಐ ಟಿ ಐ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವಾ ವಿಚಾರಗಳ ಬಗ್ಗೆ ನನಗೆ ಗೊತ್ತು. ದಾವಾ ಸ್ವತ್ತನ್ನು ನನ್ನ ತಂದೆಯವರು ಕುಳ್ಳೇಗೌಡ ಬಿನ್ ಜವರೇಗೌಡರಿಂದ ಖರೀದಿ ಮಾಡಿರುತ್ತಾರೆ. ಕುಳ್ಳೇಗೌಡರಿಗೆ ದಾವಾ ಸ್ವತ್ತು ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ದಾವಾ ಸ್ವತ್ತನ್ನು ಖರೀದಿ ಮಾಡುವ ಸಮಯದಲ್ಲಿ ಖಾಲಿ ನಿವೇಶನ ಇರುತ್ತದೆ. ಸದರಿ ಸ್ವತ್ತಿನಲ್ಲಿ ಈಗ ನಾವು ಮನೆಯನ್ನು ನಿರ್ಮಾಣ ಮಾಡಿರುತ್ತೇವೆ.

**2.** ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ರಸ್ತೆ ಇರುತ್ತದೆ. ಇನ್ನೂ ಯಾವ ದಿಕ್ಕಿಗೂ ರಸ್ತೆ ಇರುವುದಿಲ್ಲ. ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಇರುವ ರಸ್ತೆ ಇತ್ತೀಚೇಗೆ ನಿರ್ಮಾಣವಾಗಿರುತ್ತದೆ ಎಂದರೆ ಸರಿ. ನನ್ನ ತಂದೆಯವರು ಖರೀದಿ ಮಾಡುವ ಕಾಲಕ್ಕೆ ಪೂ-ಪ **35** ಅ ಡಿ ಉ-ದ **52** ಅಡಿಗಳು ನಿವಶೇನ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಖರೀದಿ ಮಾಡಿರುವ ನಿವೇಶನ ವಿಸ್ತೀರ್ಣ **45*55** ಆಗಿರುತ್ತದೆ ಎಂದು ಉತ್ತರಿಸಿದರು. ದಾವಾ ಸ್ವತ್ತಿನಲ್ಲಿ ದನಗಳನ್ನು ಕಟ್ಟಿ ಹಾಕಲು ಕಟ್ಟಡವನ್ನು ಕಟ್ಟಲು ಪಾಯ ತೆಗೆದಿದ್ದಾಗ ಪಿ ಡಿ ಒ ಅಧಿಕಾರಿಗಳು ಬಂದು ನಮಗೆ ತೊಂದರೆ ನೀಡಿರುತ್ತಾರೆ.

**3.** ದಾವಾ ಸ್ವತ್ತಿನ ಪಶ್ಚಿಮಕ್ಕೆ ಇರುವ ರಸ್ತೆಯ ಪಶ್ಚಿಮ ಮತ್ತು ಪೂರ್ವಕ್ಕೆ ಮನೆಗಳು ನಿರ್ಮಾಣವಾಗಿರುತ್ತವೆ ಎಂದರೆ ಸರಿ. ನಮ್ಮ ಮನೆಯ ಪೂರ್ವ, ಪಶ್ಚಿಮ, ಉತ್ತರ ದಿಕ್ಕುಗಳಿಗೆ ಮನೆಗಳು ನಿರ್ಮಾಣವಾಗಿರುತ್ತವೆ ಎಂದರೆ ಸರಿ. ನಮ್ಮ ಮನೆಯ ಸುತ್ತಮುತ್ತಲೂ ಇರುವ ಮನೆಗಳಿಗೂ ಉತ್ತರ ದಿಕ್ಕಿಗೆ ರಸ್ತೆ ಇದೆ. ರಸ್ತೆ ನಿರ್ಮಾಣ ಮಾಡಲು ನಮ್ಮ ನಿವೇಶನ ಭೂ ಸ್ವಾಧೀನವಾಗಿರುವುದಿಲ್ಲ. ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿ.

ನಮ್ಮ ಮನೆಯ ಪಶ್ಚಿಮ ದಿಕ್ಕಿಗೆ ಇರುವ ರಸ್ತೆಯ ಪಶ್ಚಿಮ ದಿಕ್ಕಿಗೂ ರಸ್ತೆ ಇರುತ್ತದೆ ಎಂದರೆ ಸರಿ.

**4.** ಸಾರ್ವಜನಿಕರ ಕೋರಿಕೆಯ ಮೇರೆಗೆ ಹಾಗೂ ಸಾರ್ವಜನಿಕರ ಉಪಯೋಗಕ್ಕಾಗಿ ನಮ್ಮ ಮನೆಯ ದಕ್ಷಿಣ ದಿಕ್ಕಿಗೆ ರಸ್ತೆ ನಿರ್ಮಾಣ ಮಾಡಲು ನಮ್ಮ ನಿವೇಶನವನ್ನು ನನ್ನ ತಂದೆಯ ಬಳಿ ಪಂಚಾಯತಿಯವರು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಪಂಚಾಯತಿಯವರು ನನ್ನ ತಂದೆಯವರನ್ನು ಕೇಳಿದ್ದರೂ ಸಹಾ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯ ಪೂರ್ವ ದಿಕ್ಕಿಗೆ ಖಾಲಿ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಕೇವಲ 3 ಅಡಿ ಗಲ್ಲಿ ಇರುತ್ತದೆ. ಪಂಚಾಯತಿಯವರು ದಾವಾ ಸ್ವತ್ತಿಗೆ ತೊಂದರೆ ನೀಡದೇ ಇದ್ದರೂ ಸಹಾ ಅವರ ವಿರುದ್ಧ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ದನದ ಕೊಟ್ಟಿಗೆಗೆ ಪಂಚಾಯತಿಯವರ ತೊಂದರೆ ನೀಡಿದಾಗ ನನ್ನ ತಂದೆ ಜೀವಂತವಾಗಿದ್ದರು. ಪ್ರತಿವಾದಿಯರು ದಾವಾ ಸ್ವತ್ತಿಗೆ ತೊಂದರೆ ಕೊಡದೇ ಇದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**5.** ಕ್ರಯಪತ್ರದಲ್ಲಿ ದಾವಾ ಸ್ವತ್ತಿನಲ್ಲಿರುವ ವಿಸ್ತೀರ್ಣದ ಸ್ವತ್ತನ್ನು ನಾವು ಖರೀದಿ ಮಾಡದೇ ಇದ್ದರೂ ಸಹಾ ದಾವಾ ಸ್ವತ್ತನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿಗೆ ರಸ್ತೆ ಇರುವ ಕಾರಣ ದಾವಾ ಸ್ವತ್ತಿನಲ್ಲಿ ತೋರಿಸಿರುವಷ್ಟು ವಿಸ್ತೀರ್ಣದ ಸ್ವತ್ತು ನಮಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ಮುಂದುವರಿದ ವಾದಿ ಪರ ವಿಚಾರಣೆಗೆ ಸಮಯಾವಕಾಶ ನೀಡಲಾಗಿದೆ

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.**

**ಸಾ.ಓ.ಹೇ.ಸ.ಇದೆ.**

2 ನೇ ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ, ಪಾಂಡವಪುರ